**All India Radio: Bangalore**
**National Bulletin In Kannada**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**04.06.2026 19.35 hrs**

---

ಮುಖ್ಯಾಂಶಗಳು

೧. ಗುಜರಾತ್‌ಗೆ ನಾಳೆ ಪ್ರಧಾನಿ ನರೇಂದ್ರ ಮೋದಿ ಭೇಟಿ; ೨೨ ಸಾವಿರದ ೬೦೦ ಕೋಟಿ ರೂಪಾಯಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

೨. ಕಾರ್ಯಾಚರಣೆ ದಕ್ಷತೆ ಬಲಪಡಿಸಲು ಫೀಲ್ಡ್ ಕಮಾಂಡರ್‌ಗಳ ಹಣಕಾಸಿನ ಮಿತಿ ದುಪ್ಪಟ್ಟು ನಿರ್ಧಾರಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನುಮೋದನೆ

೩. ಹತ್ತು ಸಾವಿರ ಕೋಟಿ ರೂಪಾಯಿಗಳ ಎಟಿಎಫ್ ಬೆಲೆ ಸ್ಥಿರೀಕರಣ ನಿಧಿ ಸ್ಥಾಪನೆ; ಕೇಂದ್ರ ಸರ್ಕಾರದ ಕ್ರಮ ಸ್ವಾಗತಿಸಿದ ಭಾರತೀಯ ವಿಮಾನಯಾನ ಸಂಸ್ಥೆಗಳು

೪. ವಿಶ್ವ ಬಾಕ್ಸಿಂಗ್ ಶ್ರೇಯಾಂಕ; ಅಗ್ರಸ್ಥಾನ ಪಡೆದ ಭಾರತೀಯ ಕುಸ್ತಿಪಟುಗಳು

---

ಪ್ರಧಾನಿ ನರೇಂದ್ರ ಮೋದಿ ನಾಳೆ ಗುಜರಾತ್‌ನ ಸೂರತ್ ಮತ್ತು ದಾಮನ್‌ಗೆ ಭೇಟಿ ನೀಡಲಿದ್ದಾರೆ.

ಅವರು, ಸುಮಾರು ೨೨ ಸಾವಿರದ ೬೦೦ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಪ್ರಮುಖ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ, ಲೋಕಾರ್ಪಣೆ ಮತ್ತು ಉದ್ಘಾಟನೆ ನೆರವೇರಿಸಲಿದ್ದಾರೆ.

ಇದರಲ್ಲಿ ಸಾರಿಗೆ, ಆರೋಗ್ಯ ರಕ್ಷಣೆ, ಕೈಗಾರಿಕಾ ಮೂಲಸೌಕರ್ಯ, ಇಂಧನ, ನಾಗರಿಕ ವಿಮಾನಯಾನ, ಪ್ರವಾಸೋದ್ಯಮ ಮತ್ತು ಸಾಗರ ಸಂಪರ್ಕದ ಪ್ರಮುಖ ಯೋಜನೆಗಳು ಒಳಗೊಂಡಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಾಹ್ನ ಗುಜರಾತ್‌ಗೆ ಭೇಟಿ ನೀಡಲಿದ್ದು, ಅಲ್ಲಿ ಕೈಗಾರಿಕಾ ಮೂಲಸೌಕರ್ಯಗಳನ್ನು ಪರಿಶೀಲಿಸಿದ ಬಳಿಕ, ಸೂರತ್‌ನಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವರು. ಸಂಜೆ ದಾಮನ್‌ಗೆ ಭೇಟಿ ನೀಡಲಿರುವ ಅವರು, ನಮೋ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡವನ್ನು ಹಾಗೂ ನಮೋ ಆಸ್ಪತ್ರೆಯನ್ನು ಲೋಕಾರ್ಪಣೆಗೊಳಿಸುವರು.

---

ಕಾರ್ಯಾಚರಣೆಯ ದಕ್ಷತೆಯನ್ನು ಬಲಪಡಿಸಲು ಫೀಲ್ಡ್ ಕಮಾಂಡರ್‌ಗಳ ಹಣಕಾಸಿನ ಮಿತಿಯನ್ನು ದುಪ್ಪಟ್ಟು ಮಾಡಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನುಮೋದನೆ ನೀಡಿದ್ದಾರೆ.

ನವದೆಹಲಿಯಲ್ಲಿ ಇಂದು ವೈದ್ಯಕೀಯ ಮತ್ತು ಕಾಮಗಾರಿ ಯೋಜನೆಗಳು ಸೇರಿದಂತೆ ರಕ್ಷಣಾ ಸೇವೆಗಳಿಗಾಗಿ ಪರಿಷ್ಕೃತ ಹಣಕಾಸು ಅಧಿಕಾರ ನಿಯೋಜನೆಯನ್ನು ಸಹ ಅವರು ಬಿಡುಗಡೆ ಮಾಡಿದರು.

ಪರಿಷ್ಕೃತ ಹಣಕಾಸು ಅಧಿಕಾರ ನಿಯೋಜನೆಯು ಕಂದಾಯ ಮಾರ್ಗದ ಮೂಲಕ ಒಂದು ಲಕ್ಷದ ೨೫ ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚಿನ ಮೊತ್ತದ ಖರೀದಿ ಪ್ರಕ್ರಿಯೆಯನ್ನು ಸುಗಮಗೊಳಿಸಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಹಣಕಾಸಿನ ಅಧಿಕಾರವನ್ನು ಶೇಕಡಾ ೧೦೦ ರಷ್ಟು ಹೆಚ್ಚಿಸಲಾಗಿದೆ ಮತ್ತು ಕೆಲವು ಸಂದರ್ಭಗಳಲ್ಲಿ ಇದು ದುಪ್ಪಟ್ಟಿಗಿಂತಲೂ ಹೆಚ್ಚಾಗಿದೆ. ಇದು ಫೀಲ್ಡ್ ಕಮಾಂಡರ್‌ಗಳ ಕಾರ್ಯಾಚರಣೆಯ ದಕ್ಷತೆಯನ್ನು ಮತ್ತಷ್ಟು ಬಲಪಡಿಸಲಿದೆ ಮತ್ತು ಒಪ್ಪಂದಗಳನ್ನು ವೇಗವಾಗಿ ಮುಕ್ತಾಯಗೊಳಿಸಲು ಹಾಗೂ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಕಾರಣವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಸೇನಾ, ವಾಯುಪಡೆ ಮತ್ತು ನೌಕಾಪಡೆಯ ಕಮಾಂಡರ್‌ಗಳಿಗೆ ನಿಯೋಜಿಸಲಾದ ವಿಶೇಷ ಹಣಕಾಸು ಅಧಿಕಾರವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ ಮತ್ತು ತುರ್ತು ಕಾರ್ಯಾಚರಣೆಯ ಅಗತ್ಯತೆಗಳನ್ನು ಪೂರೈಸಲು ಒದಗಿಸಲಾದ ಒಟ್ಟು ಹಣಕಾಸು ಮಿತಿಯನ್ನು ಶೇಕಡಾ ೧೦೦ ರಷ್ಟು ಹೆಚ್ಚಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

---

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತ ಅಸಾಧಾರಣ ಪ್ರಗತಿ ಸಾಧಿಸಿದ್ದು, ಪಳೆಯುಳಿಕೆ ರಹಿತ ಇಂಧನ ಸಾಮರ್ಥ್ಯದಲ್ಲಿ ವಿಶ್ವದ ಅಗ್ರ ಉತ್ಪಾದಕ ರಾಷ್ಟ್ರಗಳಲ್ಲಿ ಒಂದಾಗಿ ಹೊರಹೊಮ್ಮುತ್ತಿದೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

'ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ' ಯೋಜನೆಯ ಎರಡು ವರ್ಷಗಳ ಸಂದರ್ಭದಲ್ಲಿ ಸಚಿವರು 'ವಾಟ್ಸಾಪ್ ಚಾಟ್‌ಬಾಟ್: ಸನ್‌ತೋಷ್' ಮತ್ತು ಪಿಎಂ ಸೂರ್ಯ ಘರ್ ಲಾಂಛನವನ್ನು ಬಿಡುಗಡೆ ಮಾಡಿದರು.

ಸುಮಾರು ಲ೦ ಪ್ರತಿಶತದಷ್ಟು ಮೇಲ್ಛಾವಣಿ ಸೌರಶಕ್ತಿ ಸ್ಥಾಪನೆ ಗುರಿಯನ್ನು ಸಾಧಿಸಲಾಗಿದೆ. ೫೩ ಸಾವಿರಕ್ಕೂ ಹೆಚ್ಚು ಸರ್ಕಾರಿ ಕಟ್ಟಡಗಳನ್ನು ಸೌರಶಕ್ತಿ ಚಾಲಿತಗೊಳಿಸಲಾಗಿದ್ದು, ಒಟ್ಟು ಲ೫೫ ಮೆಗಾವ್ಯಾಟ್ ಸಾಮರ್ಥ್ಯವಿದೆ ಎಂದು ಸಚಿವ ಪ್ರಲ್ಹಾದ್ ಜೋಶಿ ಮಾಹಿತಿ ನೀಡಿದರು.

---

ಹತ್ತು ಸಾವಿರ ಕೋಟಿ ರೂಪಾಯಿಗಳ ವಾಯುಯಾನ ಟರ್ಬೈನ್ ಇಂಧನ-ಎಟಿಎಫ್ ಬೆಲೆ ಸ್ಥಿರೀಕರಣ ನಿಧಿಯನ್ನು ಅನುಮೋದಿಸುವ ಸರ್ಕಾರದ ನಿರ್ಧಾರವನ್ನು ಭಾರತೀಯ ವಿಮಾನಯಾನ ಸಂಸ್ಥೆಗಳು ಸ್ವಾಗತಿಸಿವೆ. ಇದು ಭಾರತೀಯ ವಾಯುಯಾನ ಪರಿಸರ ವ್ಯವಸ್ಥೆಗೆ ಅಗತ್ಯವಾದ ಬೆಂಬಲವನ್ನು ನೀಡುತ್ತದೆ ಎಂದು ಹೇಳಿವೆ.

ದೇಶೀಯ ಮತ್ತು ಅಂತಾರಾಷ್ಟ್ರೀಯ ಕಾರ್ಯಾಚರಣೆಗಳಿಗಾಗಿ ಏರ್‌ಲೈನ್ಸ್‌ಗೆ ಎಟಿಎಫ್ ಬೆಲೆ ಸ್ಥಿರೀಕರಣ ಬೆಂಬಲವನ್ನು ಒದಗಿಸಲು ತೈಲ ಮಾರುಕಟ್ಟೆ ಕಂಪನಿಗಳಿಗೆ ಹತ್ತು ಸಾವಿರ ಕೋಟಿ ರೂಪಾಯಿಗಳ ಒಂದು ಬಾರಿಯ ಬಜೆಟ್ ಬೆಂಬಲವನ್ನು ಕೇಂದ್ರ ಸಚಿವ ಸಂಪುಟ ನಿನ್ನೆ ಅನುಮೋದಿಸಿದೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಉಂಟಾಗುವ ಅಸಾಧಾರಣ ಇಂಧನ ಬೆಲೆ ಏರಿಳಿತದ ಅವಧಿಯಲ್ಲಿ ವಿಮಾನಯಾನ ಸಂಸ್ಥೆಗಳಿಗೆ ಸ್ಥಿರವಾದ ಎಟಿಎಫ್ ಬೆಲೆ ನಿಗದಿಯನ್ನು ಸುಗಮಗೊಳಿಸಲು ಕಂಪನಿಗಳಿಗೆ ಬೆಂಬಲ ಒದಗಿಸಲಾಗುತ್ತದೆ.

ಎಟಿಎಫ್ ಬೆಲೆ ಸ್ಥಿರೀಕರಣ ಬೆಂಬಲವನ್ನು ಪರಿಚಯಿಸುವ ಸರ್ಕಾರದ ನಿರ್ಧಾರವನ್ನು ಏರ್ ಇಂಡಿಯಾ ಶ್ಲಾಘಿಸಿದೆ. ಈ ಪ್ರಗತಿಪರ ಕ್ರಮವು ಭಾರತೀಯ ವಾಯುಯಾನ ಪರಿಸರ ವ್ಯವಸ್ಥೆಗೆ ಅಗತ್ಯವಾದ ಬೆಂಬಲವನ್ನು ಒದಗಿಸುತ್ತದೆ. ಈ ನಿರ್ಧಾರವು ದೇಶದ ಜನರಿಗೆ ಸಂಪರ್ಕವನ್ನು ಬಲಪಡಿಸುವ ಮತ್ತು ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರಿಗೆ ಹೆಚ್ಚು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಅನುವು ಮಾಡಿಕೊಡುವ ಸರ್ಕಾರದ ಬದ್ಧತೆಯನ್ನು ಬಲಪಡಿಸುತ್ತದೆ ಎಂದು ಏರ್ ಇಂಡಿಯಾ ಹೇಳಿದೆ.

ಈ ಪ್ರಮುಖ ಉಪಕ್ರಮಕ್ಕಾಗಿ ಇಂಡಿಗೊ ಏರ್‌ಲೈನ್ಸ್, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದೆ.

ವಿಮಾನ ಪ್ರಯಾಣವನ್ನು ಹೆಚ್ಚು ಸುಲಭವಾಗಿಸುವುದು, ಪ್ರಾದೇಶಿಕ ಸಂಪರ್ಕವನ್ನು ಬಲಪಡಿಸುವುದು ಮತ್ತು ಭಾರತದ ವಾಯುಯಾನ ಕ್ಷೇತ್ರದ ಬೆಳವಣಿಗೆಯನ್ನು ವೇಗಗೊಳಿಸುವಲ್ಲಿ ಸ್ಥಿರವಾದ ಎಟಿಎಫ್ ಬೆಲೆ ನಿಗದಿ ಪರಿಸರವು ಮಹತ್ವದ ಹೆಜ್ಜೆಯಾಗಿದೆ ಎಂದು ಇಂಡಿಗೊ ಏರ್‌ಲೈನ್ಸ್ ಹೇಳಿದೆ.

---

ಕೇಂದ್ರ ಸರ್ಕಾರ ಇಂದು ಏಳು ವಿಭಾಗಗಳಲ್ಲಿ ೨೦೨೫ ರ ಇ-ಆಡಳಿತಕ್ಕಾಗಿ ೨೯ನೇ ರಾಷ್ಟ್ರೀಯ ಪ್ರಶಸ್ತಿಗಳನ್ನು ಘೋಷಿಸಿದೆ.

ಇ-ಆಡಳಿತ ಕ್ಷೇತ್ರದಲ್ಲಿ ಅನುಕರಣೀಯ ಕೊಡುಗೆಗಳನ್ನು ಗುರುತಿಸಲು ೧೦ ಚಿನ್ನದ ಪ್ರಶಸ್ತಿಗಳು, ೬ ಬೆಳ್ಳಿ ಪ್ರಶಸ್ತಿಗಳು ಮತ್ತು ಒಂದು ಜ್ಯೂರಿ ಪ್ರಶಸ್ತಿ ಸೇರಿದಂತೆ ಒಟ್ಟು ೧೭ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು-ಕೊರತೆಗಳು ಮತ್ತು ಪಿಂಚಣಿ ಸಚಿವಾಲಯ ತಿಳಿಸಿದೆ.

ದೇಶಾದ್ಯಂತ ಇ-ಆಡಳಿತ ಉಪಕ್ರಮಗಳ ಅನುಷ್ಠಾನದಲ್ಲಿನ ಶ್ರೇಷ್ಠತೆಯನ್ನು ಗುರುತಿಸಲು ಮತ್ತು ಉತ್ತೇಜಿಸಲು ಈ ಪ್ರಶಸ್ತಿಗಳನ್ನು ವಾರ್ಷಿಕವಾಗಿ ನೀಡಲಾಗುತ್ತದೆ. ರಾಜಸ್ಥಾನದ ಜೈಪುರದಲ್ಲಿ ನಡೆಯಲಿರುವ ಇ-ಆಡಳಿತದ ೨೮ ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಚಿನ್ನದ ಪ್ರಶಸ್ತಿ ವಿಜೇತರಿಗೆ ಟ್ರೋಫಿ, ಪ್ರಮಾಣಪತ್ರ ಮತ್ತು ೧೦ ಲಕ್ಷ ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಬೆಳ್ಳಿ ಪ್ರಶಸ್ತಿ ವಿಜೇತರಿಗೆ ಟ್ರೋಫಿ, ಪ್ರಮಾಣಪತ್ರ ಮತ್ತು ೫ ಲಕ್ಷ ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ.

ಯೋಜನಾ ಅನುಷ್ಠಾನಕ್ಕೆ ಅಥವಾ ಸಾರ್ವಜನಿಕ ಕಲ್ಯಾಣ ಕ್ಷೇತ್ರಗಳಲ್ಲಿ ಸಂಪನ್ಮೂಲ ಅಂತರವನ್ನು ನಿವಾರಿಸಲು ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳು, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಜಿಲ್ಲೆಗಳು, ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

---

ಆಡಳಿತವನ್ನು ಸುಧಾರಿಸುವಲ್ಲಿ ಮತ್ತು ಕಲ್ಯಾಣ ಯೋಜನೆಗಳ ಪರಿಣಾಮಕಾರಿ ವಿತರಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಂತ್ರಜ್ಞಾನ ನಿರ್ಣಾಯಕ ಪಾತ್ರ ವಹಿಸಿದೆ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅಭಿಪ್ರಾಯಪಟ್ಟಿದ್ದಾರೆ.

ನವದೆಹಲಿಯಲ್ಲಿ ಇಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಆಯೋಜಿಸಿದ್ದ 'ಸುಧಾರಣಾ ಉತ್ಸವ' ಉದ್ದೇಶಿಸಿ ಮಾತನಾಡಿದ ಅವರು, ತಂತ್ರಜ್ಞಾನದ ಅಳವಡಿಕೆಯು ದೇಶಾದ್ಯಂತ ಫಲಾನುಭವಿಗಳ ಜೀವನದಲ್ಲಿ ಸ್ಪಷ್ಟವಾದ ಬದಲಾವಣೆಗಳನ್ನು ತರಲು ಸಚಿವಾಲಯಗಳಿಗೆ ಅನುವು ಮಾಡಿಕೊಟ್ಟಿದೆ ಎಂದರು.

೨೦೪೭ ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸಿದ ಅವರು, ಬಡತನವನ್ನು ನಿರ್ಮೂಲನೆ ಮಾಡುವ ಮತ್ತು ಪ್ರತಿಯೊಬ್ಬ ನಾಗರಿಕರಿಗೂ ವಸತಿ, ಕುಡಿಯುವ ನೀರು, ವಿದ್ಯುತ್, ಆಹಾರ ಭದ್ರತೆ ಮತ್ತು ಡಿಜಿಟಲ್ ಸಂಪರ್ಕವನ್ನು ಒದಗಿಸುವ ಭಾರತವನ್ನು ಸೃಷ್ಟಿಸುವುದು ಕೇಂದ್ರ ಸರ್ಕಾರದ ಗುರಿಯಾಗಿದೆ ಎಂದು ಸಚಿವ ಕಿರಣ್ ರಿಜಿಜು ಹೇಳಿದರು.

---

ದೇಶಾದ್ಯಂತ ತೈಲ ಮತ್ತು ಇಂಧನ ದಾಸ್ತಾನು ಸಮರ್ಪಕವಾಗಿದ್ದು, ಯಾವುದೇ ಕೊರತೆ ವರದಿಯಾಗಿಲ್ಲ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.

ದೆಹಲಿಯಲ್ಲಿಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ, ದೇಶದ ತೈಲಾಗಾರಗಳು ಉತ್ತಮ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

ಕಳೆದ ಮೂರು ದಿನಗಳಲ್ಲಿ ದೇಶದಲ್ಲಿ ೧.೫ ಕೋಟಿ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಮರುಪೂರಣಕ್ಕಾಗಿ ನೋಂದಣಿಯಾಗಿದ್ದು, ಈ ಪೈಕಿ ೧.೪೩ ಕೋಟಿ ಸಿಲಿಂಡರ್ ಪೂರೈಸಲಾಗಿದೆ. ಈ ಅವಧಿಯಲ್ಲಿ ಒಟ್ಟು ೧೯ ಸಾವಿರದ ೩೭೨ ಟನ್ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್, ೬೪೯ ಟನ್ ಆಟೋ ಎಲ್‌ಪಿಜಿ ಹಾಗೂ ೧.೫೭ ಲಕ್ಷ ೫ ಕೆ.ಜಿ. ಸಿಲಿಂಡರ್‌ಗಳು ಮಾರಾಟಗೊಂಡಿವೆ. ದೇಶಾದ್ಯಂತ ೫೨೦ ಶಿಬಿರಗಳ ಮೂಲಕ ೯ ಸಾವಿರದ ೨೦೦, ಐದು ಕೆ.ಜಿ. ಸಿಲಿಂಡರ್‌ಗಳನ್ನು ಮಾರಾಟ ಮಾಡಲಾಗಿದೆ ಎಂದು ತಿಳಿಸಿದರು.

ಮಾರ್ಚ್ ತಿಂಗಳಿಂದೀಚೆಗೆ ೮.೮೨ ಲಕ್ಷ ಪಿಎನ್‌ಜಿ ಸಂಪರ್ಕ ಒದಗಿಸಲಾಗಿದ್ದು, ಹೆಚ್ಚುವರಿ ೨.೯೮ ಲಕ್ಷ ಸಂಪರ್ಕಕ್ಕೆ ಮೂಲಸೌಕರ್ಯ ಕಲ್ಪಿಸಲಾಗಿದೆ.  ಅಲ್ಲದೇ, ೮.೯೮ ಲಕ್ಷ ನೂತನ ಪಿಎನ್‌ಜಿ ಗ್ರಾಹಕರು ನೋಂದಣಿಯಾಗಿದ್ದಾರೆ.  ೧೮ ಸಾವಿರದ ೪೦೦ ಪಿಎನ್‌ಜಿ ಗ್ರಾಹಕರು ತಮ್ಮ ಎಲ್‌ಪಿಜಿ ಸಂಪರ್ಕ ವಾಪಸ್ಸು ಮಾಡಿದ್ದಾರೆ ಎಂದು ಸುಜಾತಾ ಶರ್ಮ ಮಾಹಿತಿ ನೀಡಿದರು.

---

ವಿಶ್ವ ಬಾಕ್ಸಿಂಗ್ ಶ್ರೇಯಾಂಕದಲ್ಲಿ ಭಾರತ ತನ್ನ ಬಲವಾದ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಮಹಿಳೆಯರ ೫೭ ಕೆಜಿ ವಿಭಾಗದಲ್ಲಿ ಜೈಸ್ಮಿನ್ ಲಂಬೋರಿಯಾ ವಿಶ್ವದ ನಂ. ೧ ಸ್ಥಾನಕ್ಕೆ ಏರಿದರೆ, ಏಷ್ಯನ್ ಚಾಂಪಿಯನ್ ಪ್ರಿಯಾ ಘಂಗಾಸ್ ೬೦ ಕೆಜಿ ವಿಭಾಗದಲ್ಲಿ ಮತ್ತು ವಿಶ್ವನಾಥ್ ಸುರೇಶ್ ೫೦ ಕೆಜಿ ವಿಭಾಗದಲ್ಲಿ ಅಗ್ರ ಶ್ರೇಯಾಂಕಿತರಾಗಿದ್ದಾರೆ.

ಮಹಿಳೆಯರ ೪೮ ಕೆಜಿ ವಿಭಾಗದಲ್ಲಿ ಮಿನಾಕ್ಷಿ ವಿಶ್ವದ ನಂ. ೧ ಸ್ಥಾನ ಪಡೆದರು, ಪ್ರೀತಿ ೩ ನೇ ಸ್ಥಾನಕ್ಕೆ ಏರಿದರು. ೭೦ ಕೆಜಿ ವಿಭಾಗದಲ್ಲಿ ಅರುಂಧತಿ ಚೌಧರಿ, ೮೦ ಕೆಜಿ ವಿಭಾಗದಲ್ಲಿ ಪೂಜಾ ರಾಣಿ ಮತ್ತು ಪ್ಲಸ್ ೮೦ ಕೆಜಿ ವಿಭಾಗದಲ್ಲಿ ನೂಪುರ್ ಎರಡನೇ ಸ್ಥಾನದಲ್ಲಿದ್ದಾರೆ.

೫೧ ಕೆಜಿ ವಿಭಾಗದಲ್ಲಿ ನಿಖತ್ ಜರೀನ್ ಮತ್ತು ೭೫ ಕೆಜಿ ವಿಭಾಗದಲ್ಲಿ ಲೊವ್ಲಿನಾ ಬೊರ್ಗೊಹೈನ್ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿದ್ದಾರೆ.

__________ ಮುಕ್ತಾಯ _________